# ಅಮೃತಾ ಅಪೇಕ್ಷೆ

‘ಟಗರು ಪಲ್ಯ’ ಸಿನಿಮಾದಲ್ಲಿ ಹಳ್ಳಿ ಹುಡುಗಿಯಾಗಿ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದ ನಟಿ ಅಮೃತಾ ಪ್ರೇಮ್, ಎರಡನೇ ಸಿನಿಮಾದಲ್ಲಿ ಪ್ರೀತಿಯ ಕಥೆ ಹೇಳಲು ಹೊರಟಿದ್ದಾರೆ. ಮೊದಲ ಸಿನಿಮಾ ಅನುಭವ ಹಾಗೂ ಅಪ್ಪನ ಕಿವಿಮಾತುಗಳೊಂದಿಗೆ ಸಿನಿಮಾರಂಗದಲ್ಲಿ ತಮ್ಮದೇ ಧಾಟಿಯಲ್ಲಿ ಪ್ರಸ್ತುತಪಡಿಸಿಕೊಳ್ಳುವ ಅಪೇಕ್ಷೆ ಹೊಂದಿರುವ ಅವರು, ‘ಸುಧಾ’ದೊಂದಿಗೆ ಮಾತನಾಡಿದ್ದಾರೆ.



**◆ ಮೊದಲ ಸಿನಿಮಾ ಕೊಟ್ಟ ಮರೆಯಲಾರದ ಅನುಭವ?**

ಕಲಾವಿದರಾದವರಿಗೆ ಮೊದಲ ಸಿನಿಮಾ ಎಲ್ಲ ರೀತಿಯಿಂದಲೂ ವಿಶೇಷವೇ. ಹೆದರಿದ್ದು, ತಪ್ಪು ಮಾಡಿದ್ದು, ಹೊಸ ಪಾಠ ಕಲಿತದ್ದು, ಎಲ್ಲವೂ ಹೊಸತೇ ಅನುಭವಗಳು. ನನ್ನ ಮೊದಲ ಸಿನಿಮಾದಲ್ಲಿಯೇ ಒಳ್ಳೆಯ ತಂಡ ಸಿಕ್ಕಿತು, ಅನುಭವಿಗಳೊಂದಿಗೆ ಕೆಲಸ ಮಾಡಲು ಅವಕಾಶ ಸಿಕ್ಕಿತು. ಇದು ನನ್ನ ವೃತ್ತಿಜೀವನಕ್ಕೆ ಉತ್ತಮ ಅಡಿಪಾಯವಾಯಿತು. ಮೊದಲ ಬಾರಿ ಕ್ಯಾಮೆರಾ ಮುಂದೆ ನಿಂತಾಗ ಭಯವಾಯಿತು. ಆದರೆ ನನ್ನ ತಂಡ ಬೆಂಬಲಕ್ಕೆ ನಿಂತು ಆತ್ಮವಿಶ್ವಾಸ ತುಂಬಿತು.

**◆ ‘ಟಗರು ಪಲ್ಯ’ ನಂತರ ಎರಡನೇ ಸಿನಿಮಾ ಮಾಡುತ್ತಿರುವಿರಿ. ಈ ಸಿನಿಮಾದಲ್ಲಿ ಅಮೃತಾ ಅವರನ್ನು ಹೇಗೆ ಕಾಣಬಹುದು?**

ಮೊದಲನೇ ಸಿನಿಮಾ ಅನಿರೀಕ್ಷಿತ. ಎರಡನೇ ಸಿನಿಮಾ ನನ್ನ ಕರಿಯರ್ ದೃಷ್ಟಿಯಿಂದ ತುಂಬಾ ಮುಖ್ಯ. ಮೊದಲ ಸಿನಿಮಾದಲ್ಲಿ ಮಾಡಿದ ತಪ್ಪುಗಳಿಂದ ಕಲಿತ ಪಾಠಗಳನ್ನು ಇಲ್ಲಿಗೆ ಅಳವಡಿಸಿಕೊಳ್ಳುತ್ತೇನೆ. ತ್ರಿಕೋನ ಪ್ರೇಮಕಥೆಯ ಈ ಸಿನಿಮಾದಲ್ಲಿ ನನ್ನದು ಕಾಲೇಜು ಹುಡುಗಿಯ ಪಾತ್ರ. ಒಂದಷ್ಟು ವೇರಿಯೇಷನ್‌ಗಳಿರುವ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ.

**◆ ಅಭಿನಯಕ್ಕೆ ಅಪ್ಪನ ಸಲಹೆ?**

ನಾನು ಸಿನಿಮಾರಂಗಕ್ಕೆ ಬರಬೇಕೆಂದು ತೀರ್ಮಾನವಾದಾಗ ಅಪ್ಪ ಕೆಲವು ಮಾತು ಹೇಳಿದ್ದರು. ‘ಎಲ್ಲರೂ ಕಲಿಯುತ್ತಲೇ ಬೆಳೆಯುವವರು. ಕಲಿಕೆಗೆ ಕೊನೆ ಎಂಬುದಿಲ್ಲ. ಒಂದೊಂದು ಸಿನಿಮಾ ಕೂಡ ಒಂದೊಂದು ಹೊಸ ಪಾಠ ಕಲಿಸುತ್ತದೆ. ಕ್ಯಾಮೆರಾ ಮುಂದೆ ನಿಂತಾಗ ನಮ್ಮ ಕೆಲಸವನ್ನು ಶ್ರದ್ಧೆ, ಪ್ರೀತಿಯಿಂದ ಮಾಡಬೇಕಷ್ಟೆ’ ಎಂದಿದ್ದರು.

**◆ ನಟನೆಯೆಡೆಗೆ ಸೆಳೆತ ಉಂಟಾಗಲು ಕಾರಣ?**

ಚಿಕ್ಕವಯಸ್ಸಿನಿಂದಲೂ ಸಿನಿಮಾಗಳನ್ನು ತುಂಬಾ ನೋಡುತ್ತಿದ್ದೆ. ಸಿನಿಮಾ ಎಂದರೆ ತುಂಬಾ ಇಷ್ಟ. ಆ ಪ್ರೀತಿಯೇ ಇಲ್ಲಿಯವರೆಗೂ ಕರೆದುಕೊಂಡು ಬಂದಿರಬಹುದು.

**◆ ಸ್ಟಾರ್ ಕಿಡ್‌ಗಳಿಗೆ ಅವಕಾಶಗಳು ಸುಲಭವಾಗಿ ತೆರೆದುಕೊಳ್ಳುತ್ತವೆ ಎಂಬ ಮಾತಿದೆ. ಇದಕ್ಕೆ ನಿಮ್ಮ ಉತ್ತರ?**

ಸೆಲೆಬ್ರಿಟಿಗಳ ಮಕ್ಕಳಾದ್ದರಿಂದ ಚಿಕ್ಕಂದಿನಿಂದಲೂ ಜನ ನಮ್ಮನ್ನು ನೋಡಿಕೊಂಡು ಬಂದಿರುತ್ತಾರೆ. ಅವರ ತಲೆಯಲ್ಲಿ ನಾವು ಇರುತ್ತೇವೆ ಎಂಬುದು ಒಂದು ಪ್ಲಸ್ ಪಾಯಿಂಟ್.

ಸ್ಟಾರ್ ಕಿಡ್‌ಗಳಿಗೆ ಅವಕಾಶಗಳು ಸುಲಭವಾಗಿ ಸಿಗುತ್ತವೆ ಎಂದು ಕೆಲವರು ಹೇಳುತ್ತಾರೆ. ಆದರೆ ಇದನ್ನು ನಾನು ನಂಬುವುದಿಲ್ಲ. ಪಾತ್ರಕ್ಕೆ ಒಪ್ಪಿದರೆ ಮಾತ್ರ ನಿರ್ದೇಶಕರು ಅಪ್ರೋಚ್ ಮಾಡಲು ಸಾಧ್ಯ. ಪಾತ್ರಕ್ಕೆ ತಕ್ಕಂತೆ ಯಾರೇ ಆಗಿದ್ದರೂ, ಅವರ ಕೆಲಸವನ್ನು ಒಮ್ಮೆ ಗಮನಿಸಿ ಆಮೇಲೆ ಅವಕಾಶ ನೀಡುತ್ತಾರೆ. ಸಿನಿಮಾರಂಗಕ್ಕೆ ಮೊದಲ ಹೆಜ್ಜೆ ಇಡುವುದು ಸುಲಭ ಇರಬಹುದು. ಆದರೆ ಇಲ್ಲಿಗೆ ಬಂದಮೇಲೆ ಉಳಿದುಕೊಳ್ಳುವುದು ಸಾಮರ್ಥ್ಯದ ಮೇಲೆ ಎಂಬುದನ್ನು ನಂಬಿದ್ದೇನೆ. ■